ಇಲ್ಲವಲ್ಲಾ? ತಟ್ಟನೆ ಏನೋ ನೆಪ್ಪಾದಂಗಾಯ್ತು ಅವತ್ತು ಯಾರ್ದೊ ಬೈಕಲ್ಲಿ ತಂಗಿನ ಕರ್ರ್ಹೋಕೆ ಹೋಗಿದ್ನಲ್ಲ ಅಪ್ಪ, ತಾಳು ನೋಡುವ ಅಂತ ಪೇಟೆ ಬೀದಿಲಿ ನಿಂತಕ್ಕೊಂಡು ಹೋಗೋ ಬರೋ ಬೈಕನ್ನೆಲ್ಲಾ ನೋಡ್ತಾ ನಿಂತ್ಕೊಳ್ಳೋದು ಒಂದು ಕೆಲಸ ಆಯ್ತು. ದಿನ ಆ ದಾರಿಲಿ ಸೈಕಲ್ನಲ್ಲಿ ಹೋಗ್ತಿದ್ದ ಒಬ್ಬ ಮಾಸ್ತರು ಒಂದು ದಿನ ನನ್ನತವ ಬಂದು, 'ಲೋ ಹುಡುಗ ಒಂದು ವಾರದಿಂದ ನೋಡ್ತಾ ಇದ್ದೀನಿ, ಇಲ್ಲೇ ನಿಂತುಕೊಂಡು ಇರ್ತೀಯಲ್ಲ ಸ್ಕೂಲ್ಗೆ ಹೋಗಲ್ವಾ?' ಅಂತ ಕೇಳಿದರು. 'ಇಲ್ಲ' ಅಂದೆ. 'ಮನೆ ಎಲ್ಲಿ? ಯಾರ ಮಗ? ಅಪ್ಪ ಅಮ್ಮ ಏನ್ಮಾಡ್ತಾ ಇದ್ದಾರೆ' ಅಂತೆಲ್ಲಾ ವಿಚಾರಿಸಿಕೊಂಡ್ರು. 'ಶಾಲೆಗೆ ಬಾ' ಎಂದ್ರು. 'ನಾವು ಬಡವರು ಶಾಲೆಗೆ ಹೋಗಂಗಿಲ್ಲ' ಎಂದೆ, 'ಸರಿ ಸರಿ ನಿಮ್ಮ ಮನೆಗೆ ನಡಿ, ನಿಮ್ಮ ಅವ್ವನ್ನ ನೋಡೊನ' ಆಂತ ಬಂದರು.

ಅವ್ವ, 'ನಾವು ಬಡವರು ಸಾ, ನಮ್ಗೆ ವಿದ್ದೆ ಬುದ್ದಿ ಆಗಬರಲ್ಲ ಕಾಣಿ, ನಮ್ತಾವ ಅದ್ಕೆಲ್ಲಾ ಕಾಸು ಗೀಸು ಏನೂ ಇಲ್ಲಕಪ' ಅಂತ ಒಂದೇ ಮಾತಿಗೆ ನಿರಾಕರಿಸಿಬಿಟ್ಟಳು. 'ನೀವು ಜಂಗಮರು ನಮ್ಮಂತೊರಟ್ಟಿಗೆ ಹಿಂಗೆಲ್ಲಾ ಬರಬರ್ದು ಕಾಣಿ', ಅಂತ ಸಂಕೋಚ ಮುಜುಗರ ಪಟ್ಟುಕೋತ ಮುದುರಿ ಮೈಯೆಲ್ಲಾ ಹಿಡಿಯಾಗಿಸಿಕೊಂಡು ಹರಿದ ಸೀರೆಯ ತೂತು ಮುಚ್ಚಿಕೊತಾ ಪರದಾಡುತ್ತಿದ್ದಳು. ಆ ಮೇಷ್ಟ್ರು ಒಂದು ಗಂಟೆ ಹೊಸ್ಲು ಮೇಲೆ ಕುಂತು ಒಂದೇ ಸಮ ಮಾತಾಡಿ ಅಂತು ಇಂತು ನನ್ನ ಸಾಲೆಗೆ ಕಳ್ಸೋಕೆ ಒಪ್ಪಿಸಿಕೊಂಡರು.

ಆಮೇಲಾದದ್ದೆಲ್ಲಾ ಕನಸಿನಂತೆ, ಜೀವನದ ಗತಿಯೇ ಬದಲಾಯಿತು. ನನ್ನ ಬದುಕಿನ ಮಹತ್ವದ ಘಟ್ಟ ಅದು. ಮಾರನೆ ದಿನ ಅವ್ವನೆ ಇಸ್ಕೂಲಿಗೆ ಕರಕೊಂಡು ಬಂದ್ಲು. ಮೇಷ್ಟ್ರು ಎರಡು ಅಂಗಿ ಎರಡು ಚೆಡ್ಡಿ ಕೊಟ್ಟರು. ಅದ ಇಸ್ಕಂಡು ಮನೆಗೆ ಬಂದು ಬಾವಿಲಿ ಒಂದು ಕೊಡ ನೀರು ಸೇದ್ಕಂಡು ಸ್ನಾನ ಮಾಡಿ, ಮೇಷ್ಟ್ರು ಕೊಟ್ಟ ಬಟ್ಟೆ ಹಾಕ್ಕಂಡು ಮತ್ತೆ ಸಾಲೆಗೆ ಒಂಟೆ. ಒಂದು ಸ್ಲೇಟು ಬಳಪ ಕೊಟ್ಟು ಒಂದನೇ ಕಲಾಸಲ್ಲಿ ಕರ್ಸಿದ್ರು. ಅಹಾ ಅದೆಂತ ಕುಸಿ ಮೊದಲ ಬಾರಿಗೆ ಹೊಸ ಬಟ್ಟೆ ಹಾಕ್ಕಂಡೆ. ನಂಗೆ ಆಗ 9-10 ವರ್ಷ ಇರಬೊದು, ನಂಗೆ ಓದೋಕೆ ಇಷ್ಟನೇ ಇರ್ನಿಲ್ಲ. ಚೂರು ಪಾರು ಅಕ್ಸರ ಕಲ್ತೆ. ಅಷ್ಟು ವರ್ಷ ಆದರೂ ನಮ್ಮವ್ವ ಅಪ್ಪ ಯಾಕೆ ಇಸ್ಕೂಲಿಗೆ ಹಾಕಲಿಲ್ಲ, ಅನಕ್ಷರಸ್ಥರು, ಅಜ್ಞಾನಿಗಳು ಅಂತ ಈಗ ಬೈದುಕೊಳ್ಳುತ್ತಿದ್ದೇನೆ. ಬೇಸಗೆ ರಜೆ ಬಂದು ಮತ್ತೆ ಶಾಲೆಗೆ ಹೋಗೋಕೆ ಸುರುವಿಟ್ಟೆ, ಆಗ ನನ್ನ ಐದನೆ ತರಗತಿಗೆ ಕರ್ರೊಂಡ್ಹೋಗಿ ಕೂರಿಸಿಬಿಟ್ಟರು. ಐದು ಆರು ಕ್ಲಾಸು ತಳ್ಳಿ ಬಿಟ್ಟರು. ಏಳನೇ ತರಗತಿಯಲ್ಲಿ ಫೇಲಾದೆ. ನನ್ನನ್ನು ಸಾಲೆಗೆ ಸೇರಿಸಿ ನನ್ನನ್ನು ನೋಡಿಕೊಂಡ ರವಿ ಮಾಸ್ತರು 'ನಿಂಗೆ ವಿದ್ಯೆ ಅತ್ತಕ್ಕಿ' ತೇಳಿ ಅಕ್ಕಿ ಮಂಡಿಗೆ ಕೆಲಸಕ್ಕೆ ಸೇರಿಸಿದರು. ನಂಗೆ ಇದು ಲಾಯಕ್ ಅನ್ನಿಸಿ ಕುಸಿಯಾಗಿ ಕೆಲಸ ಮಾಡತೊಡಗಿದೆ. ಇಷ್ಟರ ನಡುವೆ ಅಪ್ಪ ಮನೆಗೆ ಬಂದರೆ ಬಂದ ಇಲ್ಲದಿದ್ದರೆ ಇಲ್ಲ. ಕೂಸು ಕಾಣೆಯಾದ ತವದಿಂದ ಅವ್ವ ಮಂಕಾಗಿ ಬಿಟ್ಲು. ಅಪ್ಪನ ಜೊತೆ ಮಾತನಾಡಿದ್ದು ಕಾಣೆ.

ಒಂದು ಬೆಳ್ಳಂಬೆಳಿಗ್ಗೆ ಅಯ್ಯರ ಮಗ ಮನೆ ತಾವ ಬಂದು 'ನಿಮ್ಮ ಅಪ್ಪ ನಮ್ಮ ಚರಂಡಿಲಿ ಬಿದ್ದಿದ್ದಾನೆ, ಬರಬೇಕಂತೆ' ಕಿರುಚಿದ. 'ಬಿದ್ದಿದ್ದರೆ ಬಿದ್ದಿರಲಿ ಬಿಡು, ಎಚ್ಚರಾದಾಗ ಎದ್ದು ಬರ್ತಾನೆ ಬೇವರ್ಸಿ' ಅವ್ವ ಬೈದಳು. ಹತ್ತು ನಿಮಿಸವಾದರೂ ನಾವ್ಯಾರು ಅಲ್ಲಿಗೆ ಹೋಗ್ನಿಲ್ಲ. ಆಗ ಮತ್ತೆ ಅದೇ ಹುಡುಗ ನನ್ನನ್ನು ನೋಡಿ 'ಏಹ್ ಬಾ ಅಂದರೆ ಬರ್ಲಿಲ್ಲ. ಅಲ್ಲಿ ನಿಮ್ಮಪ್ಪ ಸತ್ತು ಬಿದ್ದೌನೆ' ಎಂದಾಗ ಅವ್ವನ ಜೊತೆ ನಾನು ಓಡ್ದೆ. ಅಕ್ಕಪಕ್ಕದೋರು ಬಂದ್ರು. ನಿನ್ನೆ ಅಮವಾಸ್ಯೆ ರಾತ್ರಿ ಕಂಠಪೂರ್ತಿ ಕುಡಿದು ಅಯ್ಯರ ಮನೆ ಚರಂಡಿಲಿ ಬಿದ್ದು ಸತ್ತು ಹೋಗಿದ್ದ. 'ಹಾಳಾದೋನು ನಮ್ಮ ಚರಂಡಿಲೇ ಬಿದ್ದು ಸಾಯಬೇಕಿತ್ತಾ?' ಅಯ್ಯೋರ ಮನೆವರೆಲ್ಲಾ ಕೈಮೈ ಅಲ್ಲಾಡ್ಸುತ್ತಾ ಬೈಕೋತಿದ್ದರು.

ನಮ್ಮಿಬ್ಬರ ಕಣ್ಣಲ್ಲೂ ಒಂದು ಇಂಕರ ನೀರೂರ್ನಿಲ್ಲ. ಹಟ್ಟೀಯವರೆಲ್ಲಾ ಸೇರಕೊಂಡು ಹೆಣನಾ ಒಪ್ಪ ಮಾಡಿದ್ರು. ಅವ್ವನ ಜಡೆಗೆ ಹೂ ಮುಡಿಸಿ ಕಿತ್ತಾಕಿ, ಹಣೆಗೆ ಕಂಕುಮ ಇಟ್ಟು ಅಳಿಸಿದರು. ಕುತ್ತಿಗೆಯ ತಾಳಿ, ಕಾಲುಂಗರಗಳು ಎಂದೋ ಹೆಂಡದ ಪಾಲಾಗಿದ್ವು. ಕಿವೀಲಿ ಓಲೆ ಮೊದ್ಲೇರ್ನಿಲ್ಲ. ಅಲ್ಲಿಗೆ ಅವನ ಕಾಟ ತಪ್ಪು ಅನ್ಕಂಡ್ವಿ. ರಾತ್ರಿ ಅವ್ವ 'ಪಾಪಿ ನನ್ಮಗ ಸತ್ತ, ಅವನ ಬಾಯಿಗೆ